# ಬಿನ್ನಹಕೆ ಬಾಯಿಲ್ಲದವರು

ವಾಲ್ಮೀಕಿ ರಾಮಾಯಣದಲ್ಲಿ 'ನ ಕಶ್ಚಿನ್ನಾಪರಾಧ್ಯತಿ' ಎಂಬ ಮಾತೊಂದಿದೆ. 'ಅಪರಾಧ ಮಾಡದೇ ಇರುವವರು ಯಾರೂ ಇಲ್ಲ' ಎಂಬುದು ಇದರ ಅರ್ಥ. ನಮ್ಮ ಜೀವಿತಾವಧಿಯಲ್ಲಿ ನಾವೆಲ್ಲರೂ ಒಂದಲ್ಲ, ಒಂದು ತಪ್ಪನ್ನು ಮಾಡಿಯೇ ಇರುತ್ತೇವೆ. ಅದು ನಿರುದ್ದಿಶ್ಯವಾಗಿ ಘಟಿಸಿರಬಹುದು; ಯಾವುದೋ ಉದ್ದೇಶದಿಂದ ಕೂಡಿರಬಹುದು. ಏನೇ ಆಗಿದ್ದರೂ, ಅದು ಒಂದಿಷ್ಟು ಪರಿಣಾಮ ಮಾಡಿಯೇ ಮಾಡುತ್ತದೆ. ಅಪರಾಧವೆಂಬುದು ತನ್ನ ಜೊತೆಯಲ್ಲಿ ಶಿಕ್ಷೆಯನ್ನೂ ಹೊತ್ತು ತರುತ್ತದೆ ಎಂಬುದು ಒಂದು ನಂಬಿಕೆ. ಆ ಶಿಕ್ಷೆ ಸಮಯ ಸಂದರ್ಭಗಳಿಗನುಗುಣವಾಗಿ ನಿಧಾನವಾಗಿ ಕಾಣಿಸಿಕೊಳ್ಳಬಹುದು, ಇಲ್ಲವೇ ತತ್ಕ್ಷಣವೇ ಎದುರಾಗಬಹುದು ಎನ್ನುತ್ತಾರೆ ನಿಯತಿ ವಾದಿಗಳು. ಇಂಥ ನಂಬಿಕೆಯಿಂದಾಗಿಯೇ ನಮ್ಮಲ್ಲಿ 'ಪೂರ್ವಾರ್ಜಿತ', 'ಪ್ರಾರಬ್ಧ' ಮುಂತಾದ ಪರಿಕಲ್ಪನೆಗಳು ಹುಟ್ಟಿಕೊಂಡಿವೆಯನ್ನಬಹುದು.

ಅಪರಾಧ ಮಾಡಿದವರಲ್ಲಿ ಕೆಲವರು, ತಾವು ಮಾಡಿದ ಅಪರಾಧಕ್ಕಾಗಿ ನಾಚಿಕೊಳ್ಳುತ್ತಾರೆ; ಕಳವಳಿಸುತ್ತಾರೆ; ಪಶ್ಚಾತ್ತಾಪ ಪಡುತ್ತಾರೆ; ತಮಗೆ ತಾವೇ ಪ್ರಾಯಶ್ಚಿತ್ತ ಮಾಡಿಕೊಂಡು, ಮತ್ತೊಮ್ಮೆ ಅಂಥ ತಪ್ಪು ತಮ್ಮಿಂದ ಘಟಿಸದಂತೆ ಎಚ್ಚರ ವಹಿಸುತ್ತಾರೆ. ಅಂಥವರ ಸಾಕ್ಷೀ ಪ್ರಜ್ಞೆ ಸದಾಕಾಲ ಜಾಗೃತವಾಗಿರುತ್ತದೆ. ಗಾಂಧೀಜೀ ತಮ್ಮಿಂದಾದ ತಪ್ಪುಗಳನ್ನು– ಅವು ಎಷ್ಟೇ ಅಲ್ಪವಾಗಿದ್ದರೂ– ಹಿಮಾಲಯ ಸದೃಶ ಅಪರಾಧಗಳೆಂದು ಸಾರ್ವಜನಿಕವಾಗಿ ಒಪ್ಪಿಕೊಂಡು, ಅವುಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ನಮ್ಮ ಸಂಸ್ಕೃತಿಯಲ್ಲಿ ಈ ಬಗೆಯ ಪ್ರಾಯಶ್ಚಿತ್ತ ಸಂಸ್ಕಾರಕ್ಕೆ ಸಾಕಷ್ಟು ಮಹತ್ವವಿದೆ. ಹೊರಗಿನ ಯಾವುದೇ ಒತ್ತಡಗಳಿಲ್ಲದೆ, ಸ್ವಯಂ ಪ್ರೇರಣೆಯಿಂದ ನಮ್ಮನ್ನು ನಾವೇ ಶುದ್ಧೀಕರಣಗೊಳಿಸಿಕೊಳ್ಳುವ ಕ್ರಿಯೆಯನ್ನೇ ಪ್ರಾಯಶ್ಚಿತ್ತವೆನ್ನಬಹುದು. ಕ್ರಿಶ್ಚಿಯನ್ ಧರ್ಮದಲ್ಲಿನ ಪಾಪ ನಿವೇದನೆಯ ಪದ್ಧತಿಯೂ ಸ್ವಯಂ ಶುದ್ಧೀಕರಣದ ಒಂದು ರೂಪವೇ. ಆದರೆ ಪ್ರಾಯಶ್ಚಿತ್ತವಾಗಲೀ, ಪಾಪ ನಿವೇದನೆಯಾಗಲೀ ಯಾಂತ್ರಿಕವಾಗಿದ್ದರೆ, ಅವು ನಿರರ್ಥಕ ಕ್ರಿಯೆಗಳಾಗುತ್ತವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸ್ವಪ್ರೇರಣೆಯಿಂದ ಮಾಡಿಕೊಳ್ಳುವ ಪ್ರಾಯಶ್ಚಿತ್ತವೆಂಬುದು ವೈಯಕ್ತಿಕ ನೆಲೆಯಲ್ಲಿ ನಡೆಯುವ ನೈತಿಕ ಪರಿಮಾರ್ಜನೆ. ಈ ಪ್ರಕ್ರಿಯೆ ಸಾರ್ವತ್ರಿಕವಾಗಿ ನಡೆಯುವ ಸಾಧ್ಯತೆಗಳಿಲ್ಲವಾಗಿರುವುದರಿಂದಲೇ ಅಪರಾಧ ನಿಯಂತ್ರಣಕ್ಕೆ ಕಾನೂನು ಕಟ್ಟಳೆಗಳ ಅಗತ್ಯ ಕಾಣಿಸಿಕೊಳ್ಳುತ್ತದೆ. ತಪ್ಪು ಮಾಡಿರುವ ವ್ಯಕ್ತಿ, ವಿಚಾರಣೆಗೆ ಒಳಗಾಗಿ, ಕಾನೂನಿಗೆ ಅನುಗುಣವಾಗಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಇಂಥ ಶಿಕ್ಷೆಗಳಿಂದ ಸಾರ್ವಜನಿಕ ಸ್ವಾಸ್ಥ್ಯ ಹಾಗೂ ಅಪರಾಧಿಯ ವ್ಯಕ್ತಿತ್ವದ ಸುಧಾರಣೆ– ಎರಡೂ ಸಾಧ್ಯವಾದೀತೆಂಬ ನಂಬಿಕೆಯಿದೆ. ಅಪರಾಧಿಗೆ ಕೊಡುವ ಶಿಕ್ಷೆಯನ್ನು ನೋಡಿ, ಇತರರೂ ಪಾಠ ಕಲಿಯಬಹುದೆಂಬ ಉದ್ದೇಶವೂ ಇದೆ. ಆದರೆ ಅಪರಾಧಿಗಳೆಲ್ಲರೂ ಕಾನೂನಿನ ಹಿಡಿತಕ್ಕೆ ಒಳಗಾಗುತ್ತಾರೆಂದು ಖಚಿತವಾಗಿ ಹೇಳುವಂತಿಲ್ಲ. ಕಾನೂನಿನಿಂದ ನುಣುಚಿಕೊಂಡು, ತಮ್ಮ ಕಾಯಕವನ್ನು ಮುಂದುವರೆಸುವ ಮಂದಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತಾರೆಂದರೆ ಅತ್ಯುಕ್ತಿಯೇನಲ್ಲ.

ಕೊಲೆ, ಸುಲಿಗೆ, ದರೋಡೆ– ಇಂಥ ಅಪರಾಧಗಳು ಸ್ವಯಂ ಸ್ಪಷ್ಟವಾಗಿರುವುದರಿಂದ, ಅವು ಕಾನೂನಿನ ಪ್ರಕ್ರಿಯೆಗೆ ಒಳಗಾಗುವುದು ಅಷ್ಟೊಂದು ಕಷ್ಟವಲ್ಲ. ಆದರೆ ಅಪರಾಧಗಳನ್ನು ಸುಲಭವಾಗಿ ಜೀರ್ಣಿಸಿಕೊಂಡು, ಸಂಭಾವಿತರೆಂಬ ಮುಖವಾಡ ಹಾಕಿಕೊಂಡು ವಿಜೃಂಭಿಸುವ ನಯವಂಚಕರು ಕಾನೂನಿನ ಕಕ್ಷೆಯಲ್ಲಿ ಬರುವುದೇ ಇಲ್ಲ. ತಾವು ಜನ ಸೇವಕರೆಂದು ಹೇಳಿಕೊಳ್ಳುತ್ತಾ ಸ್ವಾರ್ಥ ಸಾಧನೆ ಮಾಡುವ ಇಂಥ ಜನ, ತಮ್ಮ ಬಗ್ಗೆ ಸಾರ್ವಜನಿಕರು ಆಕ್ಷೇಪಣೆ ಮಾಡಿದಾಗ– 'ನಮ್ಮಿಂದ ತಪ್ಪಾಗಿದೆ, ದಯಮಾಡಿ ಕ್ಷಮಿಸಿ. ಮತ್ತೆ ಇಂಥ ತಪ್ಪು ಮಾಡುವುದಿಲ್ಲ' ಎನ್ನುತ್ತಾರೆ. ಆಣೆ–ಪ್ರಮಾಣಗಳಿಂದ ಸಾರ್ವಜನಿಕರಲ್ಲಿ ತಮ್ಮ ಬಗ್ಗೆ ವಿಶ್ವಾಸ ಮೂಡುವಂತೆ ಸೋಗುಹಾಕುತ್ತಾರೆ. ಕೆಲವೊಮ್ಮೆ ಇನ್ನೊಬ್ಬರತ್ತ ಕೈ ತೋರಿಸಿ, ಅವರೂ ತಪ್ಪು ಮಾಡಿರುವಾಗ ತಮ್ಮದೇನು? –ಎಂದು ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ. ಇಂಥವರ ಅಪರಾಧಗಳು ಪಾದರಸದ ಬಿಂದುವಿನಂತೆ ಕಾನೂನು ಕಟ್ಟಳೆಗಳಿಗೆ ಸಿಲುಕಿಕೊಳ್ಳದೆ, ಜಾರಿಕೊಳ್ಳುತ್ತವೆ.

'ಬಿನ್ನಹಕೆ ಬಾಯಿಲ್ಲವಯ್ಯಾ...' ಎಂದು ಪ್ರಾರಂಭವಾಗುವ ಪುರಂದರ ದಾಸರ ಕೀರ್ತನೆಯನ್ನು ನಾವೆಲ್ಲರೂ ಕೇಳಿದ್ದೇವೆ. ಅದರಲ್ಲಿ ದಾಸರು ತಾವು ಮಾಡಿದ ಅಪರಾಧಗಳನ್ನು ಕುರಿತು ಪಶ್ಚಾತ್ತಾಪ ವ್ಯಕ್ತಪಡಿಸುತ್ತಾ ಅವುಗಳಿಗಾಗಿ ಕ್ಷಮೆ ಕೇಳುವ ಅರ್ಹತೆಯೂ ತಮಗಿಲ್ಲವೆಂದು ಪ್ರಾಂಜಲವಾಗಿ ಹೇಳಿಕೊಂಡಿದ್ದಾರೆ. ತಮ್ಮ ಅಪರಾಧಗಳಿಗೆ ಅನ್ನಮದ, ಅರ್ಥಮದ ಮುಂತಾದ ಮದಗಳೂ; ಸತಿಮೋಹ, ಸುತಮೋಹ ಇತ್ಯಾದಿ ಸ್ವಜನ ಮೋಹಗಳೂ; ಎಷ್ಟಿದ್ದರೂ ಮತ್ತಷ್ಟು ಬೇಕೆಂಬ ದುರಾಶೆಯೂ– ಮುಖ್ಯ ಪ್ರೇರಣೆಗಳೆಂದು ಪಟ್ಟಿ ಮಾಡಿದ್ದಾರೆ. ಅಪರಾಧಗಳನ್ನು ಜೀರ್ಣಿಸಿಕೊಂಡು 'ಮತ್ತೆಂದೂ ಇಂಥ ತಪ್ಪು ಮಾಡುವುದಿಲ್ಲ' ಎಂಬ ಪಲ್ಲವಿಯನ್ನು ಮತ್ತೆ ಮತ್ತೆ ಹಾಡುವ ಮಂದಿ ಪುರಂದರ ದಾಸರು ಪಟ್ಟಿ ಮಾಡಿರುವ ಎಲ್ಲ ಸಂಗತಿಗಳಿಂದಲೂ ಪ್ರೇರಿತರಾದಂಥವರು. ಆದ್ದರಿಂದಲೇ ಅಂಥವರನ್ನು 'ಬಿನ್ನಹಕೆ ಬಾಯಿಲ್ಲದವರು' ಎನ್ನಬಹುದೇನೋ!

■ ವೈನತೇಯ

## ಮಾತೇ ಮುತ್ತು

★ ಪರಿಶ್ರಮ ಮೆಟ್ಟಿಲಿನಂತೆ, ಅದೃಷ್ಟ ಲಿಫ್ಟ್‌ನಂತೆ, ಅದೃಷ್ಟ ಕೈಕೊಡಬಹುದು. ಆದರೆ ಮೆಟ್ಟಿಲು ನಿಮ್ಮನ್ನು ಶಿಖರಕ್ಕೆ ಕೊಂಡೊಯ್ಯುತ್ತದೆ.
–ಎ.ಪಿ.ಜೆ.ಅಬ್ದುಲ್ ಕಲಾಂ

★ ಸೂರ್ಯ ಮುಳುಗಿದಾಗ ನಕ್ಷತ್ರಗಳು ಹೊಳೆಯುತ್ತವೆ!
–ರಾಬರ್ಟ್ ಸೌತ್‌ವೆಲ್

★ ಜೀವನ ಯಾತ್ರೆಯಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನ ಅಜ್ಞಾನದ ಲಾಭ ಪಡೆದು, ತನಗಿಲ್ಲದ ಯೋಗ್ಯತೆಯನ್ನು ಆರೋಪಿಸಿಕೊಂಡು– ಮನಸ್ಸು ಖಂಡಿಸಿದರೂ– ಬಹಿರಂಗದಲ್ಲಿ ಬಂದ ಹೆಸರನ್ನು ಸ್ವೀಕರಿಸುತ್ತಾನೆ.
–ಜಾನ್‌ಸನ್

★ ಒಳ್ಳೆಯ ಕೆಲಸ ಉತ್ಕೃಷ್ಟ, ಒಳ್ಳೆಯ ಮಾತು ಉತ್ಕೃಷ್ಟತರ, ಒಳ್ಳೆಯ ಆಲೋಚನೆ ಉತ್ಕೃಷ್ಟತಮ.
–ಎಸ್.ವಿ.ರಂಗಣ್ಣ

★ ರೈತರೇ ಮಾನವ ನಾಗರಿಕತೆಯ ಸ್ಥಾಪಕರು.
–ಡೇನಿಯಲ್ ವೆಬ್‌ಸ್ಟರ್

★ ನಮ್ಮ ಬಗ್ಗೆ ನಾವು ಏನು ಯೋಚಿಸುತ್ತೇವೋ ಅದೇ ನಮ್ಮ ಅದೃಷ್ಟವನ್ನು ನಿರ್ಧರಿಸುತ್ತದೆ.
–ಎಚ್.ಡಿ.ಥೋರಿಯೋ

★ ಸಮಸ್ಯೆ ಬಂದಾಗ ಗಾಬರಿಯಾಗದೆ ಸೂಕ್ತ ಸಲಹೆ ಪಡೆದರೆ ಸಮಸ್ಯೆಗಳ ನಿವಾರಣೆ ಸಾಧ್ಯ.
–ವೀರೇಂದ್ರ ಹೆಗ್ಗಡೆ

★ ಎಣ್ಣೆ ಬೇರೆ ಬತ್ತಿ ಬೇರೆ; ಎರಡೂ ಕೂಡಿ ಸೊಡರಾಯಿತ್ತು! ಪುಣ್ಯ ಬೇರೆ, ಪಾಪ ಬೇರೆ; ಎರಡೂ ಕೂಡಿ ಒಡಲಾಯಿತ್ತು! ಮಿಗಬಾರದು, ಮಿಗದಿರಬಾರದು– ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು.
–ಅಲ್ಲಮಪ್ರಭು

★ ಸಕಲ ಸಾಂಬಾರಗಳ ಬೆರಸಿ ಒಂದನು ರಸಿಸ ಬಲ್ಲವನು ಮಾತ್ರ ರಸಿಕ!
–ಕೆ.ಎಸ್.ನರಸಿಂಹಸ್ವಾಮಿ

★ ತನ್ನ ಮನಸ್ಸಿಗೆ ಆನಂದವನ್ನು ಕೊಡುವ ಭೋಗಗಳನ್ನು ಅನುಭವಿಸುವುದರಲ್ಲಿ ಕಷ್ಟ ಸುಖಗಳನ್ನಾಗಲೀ, ಲಾಭ ನಷ್ಟಗಳನ್ನಾಗಲೀ, ಕೊನೆಗೆ ಧರ್ಮಾಧರ್ಮಗಳನ್ನಾಗಲಿ ಹೆಚ್ಚಾಗಿ ಗಮನಿಸದೆ ಕೆಲಸ ಮಾಡುವವನು ರಸಿಕ.
–ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ

★ ಒಬ್ಬ ನಾಗರಿಕ ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡುವುದೇ ರಾಜಕೀಯ.
–ಸ್ವಾಮಿ ರಂಗನಾಥಾನಂದ

★ ರೈತನ ಬಾಳು ಸಣ್ಣ ದೆನಿಸಿದರೂ ಬಹುಕಾಲ ಬದುಕುವಂತಹುದು. ಅವನು ಯಾವಾಗಲೂ ಶ್ರೀಮಂತವಾಗಿರಲಾರ. ಆದರೆ ಸದಾ ಸಾಕಷ್ಟು ಅವನಲ್ಲಿರುತ್ತದೆ.
–ಲಿಯೋ ಟಾಲ್‌ಸ್ಟಾಯ್

★ ರೋಗಿಯನ್ನು ಕೊಂದು ರೋಗವನ್ನು ಗುಣಪಡಿಸುವುದೆನ್ನುವುದು ಎಂಥ ಆರೋಗ್ಯ?
–ರವೀಂದ್ರನಾಥ ಠಾಕೂರ್